# ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.

ಸಂಖ್ಯೆ: ಆರ್‌ಎಸ್‌ಆರ್/211/ಎಕ್ಸ್‌ಎಂಸಿ/2007-08. ದಿನಾಂಕ: 09-6-2008.

ವಿಷಯ:- ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 17 ರ ತಿದ್ದುಪಡಿ- ಸಿಬ್ಬಂದಿ ವೃಂದಬಲ ಹಾಗೂ ವೇತನ ಶ್ರೇಣಿ, ಇತರೆ ಭತ್ಯೆಗಳ ಮಂಜೂರಾತಿ- ಮಾರ್ಗಸೂಚಿಗಳು.

ಉಲ್ಲೇಖ:- 1. ಅಧಿಸೂಚನೆ ಸಂಖ್ಯೆ: ಸಿಒ/238/ಸಿಎಲ್‌ಎಂ/2007, ದಿನಾಂಕ 13-2-2008
2. ಸರ್ಕಾರಿ ಆದೇಶ ಸಂ.ಸಿಒ/15/ಸಿಎಲ್‌ಎಂ/2005, ದಿನಾಂಕ 3-2-2005.
3. ಅಧಿಸೂಚನೆ ಸಂ. ಸಿಒ/61/ಸಿಎಲ್‌ಎಂ/2007, ದಿನಾಂಕ 24-8-2007.

--

ಉಲ್ಲೇಖ(1) ರಲ್ಲಿನ ಅಧಿಸೂಚನೆ ಪ್ರಕಾರವಾಗಿ ಸಹಕಾರ ಸಂಘಗಳ ನಿಯಮ 17 ರ ಪ್ರಕಾರ ಸಹಕಾರ ಸಂಘಗಳ ಸಿಬ್ಬಂದಿ ವೃಂದ ಬಲ ಹಾಗೂ ವೇತನಶ್ರೇಣಿ ನಿಗಧಿಪಡಿಸುವ ಅಧಿಕಾರವನ್ನು ಆಯಾ ಸಂಘದ ಆಡಳಿತ ಮಂಡಳಿಗೆ ನೀಡಲಾಗಿರುತ್ತದೆ. ಉಲ್ಲೇಖ(2) ರಲ್ಲಿನ ಆದೇಶದಲ್ಲಿ ಸಹಕಾರ ಸಂಘಗಳ ಸಿಬ್ಬಂದಿ ವೃಂದಬಲ ಹಾಗೂ ವೇತನ ಶ್ರೇಣಿ ನಿಗಧಿ ಮಾಡುವಾಗ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸುವ ಕುರಿತು ಸಹಕಾರ ಸಂಘಗಳ ಕಾಯ್ದೆ ಕಲಂ 30-ಬಿ (1) ಅಡಿಯಲ್ಲಿ ನಿರ್ದೇಶವನ್ನು ನೀಡಲಾಗಿರುತ್ತದೆ.

ಉಲ್ಲೇಖ(3) ರಲ್ಲಿನ ಸರ್ಕಾರದ ತಿದ್ದುಪಡಿ ಆದೇಶದ ಪ್ರಕಾರವಾಗಿ ಕೆಲವೊಂದು ವರ್ಗದ ಸಹಕಾರ ಸಂಘಗಳಿಗೆ ಉಲ್ಲೇಖ(2) ರಲ್ಲಿನ ನಿರ್ದೇಶನಗಳಿಂದ ವಿನಾಯಿತಿ ನೀಡಿ, ಅಂತಹ ಸಹಕಾರ ಸಂಘಗಳು ಸಿಬ್ಬಂದಿ ನೇಮಕಾತಿ ಹಾಗೂ ವೃಂದಬಲ ನಿಗಧಿ ಕುರಿತಂತೆ ಪಾರದರ್ಶಕತೆಪುಳ್ಳ ಪೂರಕ ನಿಯಮಗಳನ್ನು ರಚಿಸಿಕೊಂಡು ಸಹಕಾರ ಸಂಘಗಳ ನಿಬಂಧಕರ ಅನುಮೋದನೆ ಪಡೆದುಕೊಳ್ಳುವುದು ಅವಶ್ಯಕವಾಗಿರುತ್ತದೆ.

ಈಗ ರಾಜ್ಯದ ಕೆಲವೊಂದು ಸಹಕಾರ ಸಂಘಗಳು ವೃಂದಬಲ ನಿಗಧಿ ಹಾಗೂ ಸಿಬ್ಬಂದಿ ನೇಮಕಾತಿ ಹಾಗೂ ವೇತನ ಶ್ರೇಣಿ ನಿಗಧಿ ಕುರಿತಂತೆ ನಿಯಮಾವಳಿಗಳನ್ನು ರಚಿಸಿಕೊಂಡು ಅನುಮೋದನೆ ಸಲ್ಲಿಸುತ್ತಿದ್ದಾರೆ. ಈ ತರಹವಾದ ಅನುಮೋದನೆಗಳನ್ನು ನೀಡುವಾಗ ರಾಜ್ಯಾದಾದ್ಯಂತ ಏಕರೀತಿಯ ಪದ್ಧತಿ ಹಾಗೂ ಮಾನದಂಡಗಳು ಇರುವುದು ಉಚಿತವೆಂದು ಭಾವಿಸಲಾಗಿದೆ. ರಾಜ್ಯದಲ್ಲಿನ ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳಿ ಹಾಗೂ ಸರ್ಕಾರದ ಧನ ಸಹಾಯ ಪಡೆಯದಿರುವ ಇತರ ಸಹಕಾರ ಸಂಘಗಳು ಪಾರದರ್ಶಕ ನೇಮಕಾತಿ ಪ್ರಕ್ರಿಯೆ ನಿಯಮಾವಳಿಗಳನ್ನು ರಚಿಸುವಾಗ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ಸಾಮಾನ್ಯ ಸಭೆಯು ಅನುಮೋದಿಸಿದ ಆಯವ್ಯಯ ಹಾಗೂ ಸಂಘದ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಸಹಕಾರ ಸಂಘದ ಆಡಳಿತ ಮಂಡಳಿಯು ಆಯಾ ಸಂಘದ ಸಿಬ್ಬಂದಿ ವೃಂದಬಲ, ವೇತನ ಶ್ರೇಣಿ ಹಾಗೂ ಇತರೇ ಭತ್ಯೆಗಳನ್ನು ಕಾಲಕಾಲಕ್ಕೆ ನಿರ್ಧರಿಸತಕ್ಕದ್ದು. ಈ ರೀತಿ ನಿರ್ಧರಿಸಲು ಸಂಘದಲ್ಲಿ ಕೆಲಸದ ಒತ್ತಡ (workload) ಹಾಗೂ ಇಂತಿಷ್ಟು ವ್ಯವಹಾರಕ್ಕೆ ಒಬ್ಬ ಸಿಬ್ಬಂದಿ ಇರಬೇಕೆಂಬ ಅಂಶವನ್ನು ಸೇರಿಸಿಕೊಳ್ಳತಕ್ಕದ್ದು. (ಉದಾಹರಣೆಗೆ- ಪಟ್ಟಣ ಬ್ಯಾಂಕುಗಳ ಒಂದು ಕೋಟಿ ಸಾಲ ವ್ಯವಹಾರಕ್ಕೆ ಒಬ್ಬ ಸಿಬ್ಬಂದಿಯಂತೆ.) ಉಳಿದ ಚಟುವಟಿಕೆಗಳ ಸಹಕಾರ

ಸಂಘಗಳು ಅವರವರ ಚಟುವಟಿಕೆಗಳಿಗೆ ಅನ್ವಯಿಸುವಂತೆ ಈ ಪ್ರಮಾಣವನ್ನು ನಿಗಧಿಪಡಿಸಿಕೊಳ್ಳತಕ್ಕದ್ದು.

2. ಆದರೆ ಸಂಘವು ಕಳೆದ 3 ವರ್ಷಗಳಲ್ಲಿ ಸತತ ನಷ್ಟದಲ್ಲಿದ್ದಲ್ಲಿ ಅಥವಾ ಸಂಚಿತ ನಷ್ಟ ಹೊಂದಿದ್ದಲ್ಲಿ ಅಥವಾ ಸಿಬ್ಬಂದಿ ವೆಚ್ಚವು ಕಳೆದ ವಾರ್ಷಿಕ ದುಡಿಯುವ ಬಂಡವಾಳ/ವಹಿವಾಟಿನ ಶೇಕಡಾ 2 ಕ್ಕಿಂತ ಹೆಚ್ಚಾಗಿದ್ದಲ್ಲಿ ಸಿಬ್ಬಂದಿ ವೃಂದಬಲ ಅಥವಾ ವೇತನ ಶ್ರೇಣಿ ಹಾಗೂ ಇತರೆ ಭತ್ಯೆ ನಿರ್ಧರಿಸುವುದು/ಹೆಚ್ಚಿಸಬೇಕಾಗಿದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆಯತಕ್ಕದ್ದು.

3. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಯಾವುದೇ ಹೊಸ ಹುದ್ದೆಯನ್ನು ಸೃಜಿಸಿದಲ್ಲಿ ಅಥವಾ ಯಾವುದೇ ಭತ್ಯೆಯನ್ನು ಹೆಚ್ಚಿಸಿದಲ್ಲಿ ಅಥವಾ ವೇತನ ಶ್ರೇಣಿಯನ್ನು ಪರಿಷ್ಕರಿಸಿದಲ್ಲಿ ಈ ಬಗ್ಗೆ ಆರ್ಥಿಕ ಹೊರೆ, ಆಡಳಿತ ಮಂಡಳಿಯ ಠರಾವು ಹಾಗೂ ನ್ಯಾಯಬದ್ಧ ಸಮರ್ಥನೆ ಸಹಿತ ಪ್ರಸ್ತಾವ ವರದಿಯನ್ನು ನಿಬಂಧಕರಿಗೆ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಸಂಘದ ಆಡಳಿತ ಮಂಡಳಿಯ ಸದಸ್ಯರು/ಮುಖ್ಯಕಾರ್ಯನಿರ್ವಹಣಾಧಿಕಾರಿಯು ಜವಾಬ್ದಾರರಾಗುತ್ತಾರೆ.

4. ಕರ್ನಾಟಕ ಸರ್ಕಾರ ಅನುಸರಿಸುತ್ತಿರುವ ಮೀಸಲಾತಿ ಪ್ರಮಾಣವನ್ನು ಕಡ್ಡಾಯವಾಗಿ ಎಲ್ಲಾ ಸಹಕಾರ ಸಂಘಗಳು ಪಾಲಿಸತಕ್ಕದ್ದು.

5. ಆಡಳಿತ ಮಂಡಳಿಯ ನಿರ್ದೇಶಕರ ಹತ್ತಿರದ ಸಂಬಂಧಿಗಳ ನೇಮಕಾತಿಗೆ ಅನರ್ಹತೆಯೆಂದು ವಿಧಿಸತಕ್ಕದ್ದು.

6. ಹುದ್ದೆಗಳಿಗೆ ವಿದ್ಯಾರ್ಹತೆಯನ್ನು ನಿಗಧಿಪಡಿಸುವಾಗ ನಿರ್ವಹಿಸಬೇಕಾದ ಕೆಲಸದ ಅಗತ್ಯತೆಗನುಗುಣವಾಗಿ ವಿದ್ಯಾರ್ಹತೆಯನ್ನು ನಿಗಧಿಪಡಿಸತಕ್ಕದ್ದು ಹಾಗೂ ಇದರೊಂದಿಗೆ ಸಹಕಾರ ವಿಷಯದಲ್ಲಿ ಪದವಿ, ಡಿಪ್ಲೋಮಾ ಹಾಗೂ ಸಹಕಾರಿ ಸಂಸ್ಥೆಗಳಲ್ಲಿ ಅನುಭವ ಹೊಂದಿರುವವರಿಗೆ ಕನಿಷ್ಟ ಶೇ.25 ಮೀಸಲಾತಿ ಕಲ್ಪಿಸತಕ್ಕದ್ದು. ನೇಮಕ ಮಾಡಿಕೊಳ್ಳುವ ಹುದ್ದೆ ಸಂಖ್ಯೆ ಕಡಿಮೆ ಇದ್ದು ಮೀಸಲಾತಿ ಪ್ರಮಾಣ ನಿಗಧಿಪಡಿಸಲು ಸಾಧ್ಯವಾಗದ ಸಂದರ್ಭದಲ್ಲಿ, ಸಹಕಾರ ವಿಷಯದಲ್ಲಿ ಪದವಿ, ಸಹಕಾರಿ ಸಂಸ್ಥೆಗಳಲ್ಲಿ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಶೇ. 5 ಪ್ರಮಾಣದ ತೋಲನವ್ಯಯ ನೀಡುವುದು.

7. ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿದ ಅಥವಾ ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು 1 : 5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯತಕ್ಕದ್ದು. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕವನ್ನು ಅಥವಾ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕವನ್ನು ಶೇಕಡ 85 ರಷ್ಟಕ್ಕೆ ಇಳಿಸಿ, ಉಳಿದ 15 ಅಂಕಗಳನ್ನು ಸಂದರ್ಶನಕ್ಕೆ ಇಡತಕ್ಕದ್ದು.

8. ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಪ್ರತಿ ಸಂಘವು ಈ ಕೆಳಕಂಡಂತೆ ಒಂದು ನೇಮಕಾತಿ ಸಮಿತಿಯನ್ನು ಹೊಂದಿರತಕ್ಕದ್ದು.

| | | |
|---|---|---|
| 1 | ಸಂಘದ ಅಧ್ಯಕ್ಷರು | ಅಧ್ಯಕ್ಷರು |
| 2 | ಆಡಳಿತ ಸಮಿತಿಯಲ್ಲಿ ಆಯ್ಕೆ ಮಾಡಿಕೊಂಡ ಇಬ್ಬರು ನಿರ್ದೇಶಕರು (ಇವರಲ್ಲಿ ಒಬ್ಬರು ಉಪಾಧ್ಯಕ್ಷರು ಇದ್ದಲ್ಲಿ) | ಸದಸ್ಯರು |
| 3 | ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ | ಸದಸ್ಯರು |
| 4 | ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಸಂಚಾಲಕ ಸದಸ್ಯರು |

9. ಲಿಖಿತ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್, ಪೂನಾ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಟಾಫ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು ಕೆನರಾ ಬ್ಯಾಂಕ್ ಸ್ಟಾಫ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು, ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು ಮುಂತಾದ ವೃತ್ತಿಪರತೆಯುಳ್ಳ ಏಜೆನ್ಸಿಗಳಿಂದ ನಡೆಸತಕ್ಕದ್ದು.

10. ನೇಮಕಾತಿ ಪ್ರಕ್ರಿಯೆಯು ಲಿಖಿತ ಪರೀಕ್ಷೆ ಮತ್ತು ಸಂದರ್ಶನ ಒಳಗೊಂಡಿದ್ದಲ್ಲಿ, ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿ ಸಂದರ್ಶನಕ್ಕೆ ಕರೆಯಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಸಂಖ್ಯೆಯ 5 ಪಟ್ಟಿಗೆ ಮೀರತಕ್ಕದ್ದಲ್ಲ. ನೇಮಕಾತಿ ಪ್ರಕ್ರಿಯೆಯು ಕೇವಲ ಸಂದರ್ಶನವನ್ನು ಒಳಗೊಂಡಿದ್ದಲ್ಲಿ ಸಂದರ್ಶನಕ್ಕೆ ಕರೆಯಬೇಕಾದ ಅಭ್ಯರ್ಥಿಗಳನ್ನು ನಿಗದಿಪಡಿಸಿದ ವಿದ್ಯಾರ್ಹತೆ ಪರೀಕ್ಷೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡತಕ್ಕದ್ದು ಮತ್ತು ಅಂತಹ ಅಭ್ಯರ್ಥಿಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಸಂಖ್ಯೆಯ 5 ಪಟ್ಟಿಗೆ ಮೀರತಕ್ಕದ್ದಲ್ಲ.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ,

1. ಕೇಂದ್ರ ಕಛೇರಿಯ ಎಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ.
2. ಎಲ್ಲಾ ಪ್ರಾಂತ ಕಛೇರಿಗಳ ಜಂಟಿ ನಿಬಂಧಕರುಗಳಿಗೆ.
3. ಎಲ್ಲಾ ಜಿಲ್ಲಾ ಉಪನಿಬಂಧಕರುಗಳಿಗೆ.
4. ಎಲ್ಲಾ ಉಪವಿಭಾಗದ ಸಹಾಯಕ ನಿಬಂಧಕರುಗಳಿಗೆ.
5. ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಘಗಳಿಗೆ.

<u>ಪ್ರತಿಯನ್ನು:-</u>

1. ಗೌರವಪೂರ್ವಕವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
2. ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ನಂ.32, ಜಯನಿವಾಸ, ಶಂಕರ ಮಠ ರಸ್ತೆ, ಬೆಂಗಳೂರು.
3. ಆಯುಕ್ತರು, ಕೈಮಗ್ಗ ಮತ್ತು ಜವಳಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
4. ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರು, ಕ್ರೆಸೆಂಟ್ ರಸ್ತೆ, ಬೆಂಗಳೂರು.

ಯ: 9/6

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಹಕಾರ ಸಂಘಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆ ತರುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಸಿಒ 15 ಸಿಎಲ್ಎಂ 2005, ಬೆಂಗಳೂರು, ದಿನಾಂಕ: 03.02.2005.

2. ಸರ್ಕಾರದ ಆದೇಶ ಸಂಖ್ಯೆ: ಸಿಒ 15 ಸಿಎಲ್ಎಂ 2005, ಬೆಂಗಳೂರು, ದಿನಾಂಕ: 13.06.2011.

***

**ಪ್ರಸ್ತಾವನೆ :**

ಸಹಕಾರ ಸಂಘಗಳಲ್ಲಿನ ಸೇವೆಗಳಲ್ಲಿನ ವಿವಿಧ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸಿ ನೇಮಕಾತಿ ಮಾಡಿಕೊಳ್ಳಲು ಮೇಲೆ ಓದಲಾದ (1) ಮತ್ತು (2)ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ(1) ಅಡಿಯಲ್ಲಿ ನಿರ್ದೇಶನ ನೀಡಲಾಗಿತ್ತು. ಸಹಕಾರ ಸಂಘಗಳಲ್ಲಿ ಸೇವೆಗಳಲ್ಲಿನ ವಿವಿಧ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸಿ ನೇಮಕಾತಿ ಮಾಡಿಕೊಳ್ಳಲು ಹಾಗೂ ಸಂವಿಧಾನದ 97ನೇ ತಿದ್ದುಪಡಿಯನ್ವಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (ತಿದ್ದುಪಡಿ 2012) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಹಿನ್ನೆಲೆಯಲ್ಲಿ ಹಾಲಿ ಇರುವ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30 (ಬಿ) ಅಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಒ 15 ಸಿಎಲ್ಎಂ 2005, ದಿನಾಂಕ: 13.06.2011ರಂದು ಹೊರಡಿಸಿರುವ ನಿರ್ದೇಶನವನ್ನು ಹಿಂಪಡೆಯುವುದು ಸೂಕ್ತವೆಂದು ಸರ್ಕಾರವು ಪರಿಗಣಿಸಿದೆ.

ಸಿಬ್ಬಂದಿಗಳನ್ನು ನೇಮಕಾತಿ ಮಾಡುವಾಗ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ಉಪಬಂಧಗಳನ್ನು ಪಾಲನೆ ಮಾಡದಿರುವುದು ಮತ್ತು ಈ ನಿಟ್ಟಿನಲ್ಲಿ ಮೀಸಲಾತಿ ನಿಯಮಗಳನ್ನು ಒಳಗೊಂಡಂತೆ ಕಾಲ ಕಾಲಕ್ಕೆ ಸರ್ಕಾರವು ನೀಡಿರುವ ಹಲವಾರು ನಿರ್ದೇಶನಗಳನ್ನು ಪಾಲನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯವು ಸಿಬ್ಬಂದಿ ನೇಮಕಾತಿ ವಿಷಯದಲ್ಲಿ ಮೌಖಿಕ ಅಂಕವು ಒಟ್ಟು ಅಂಕದ ಶೇಕಡಾ 15ರಷ್ಟು ಹೆಚ್ಚಿರಬಾರದು ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಸಹಕಾರ ಸಂಘಗಳಿಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸುವುದು ಅತಿ ಅವಶ್ಯಕತೆಯೆಂದು ಪರಿಗಣಿಸಿ, ಸೂಕ್ತ ನಿರ್ದೇಶನ ನೀಡಲು ತೀರ್ಮಾನಿಸಿದೆ.

ಆದುದರಿಂದ ಈ ಕೆಳಕಂಡ ಆದೇಶ ಹೊರಡಿಸಿದೆ.

70
21/8/13

**ಸರ್ಕಾರದ ಆದೇಶ ಸಂಖ್ಯೆ: ಸಿಒ 166 ಸಿಎಲ್ಎಂ 2012, ಬೆಂಗಳೂರು, ದಿನಾಂಕ: 22.08.2013**

ದಿನಾಂಕ: 13.06.2011ರಂದು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30(ಬಿ) ಅಡಿಯಲ್ಲಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಸಿಒ 15 ಸಿಎಲ್ಎಂ 2005 ಅನ್ನು

→

27/8

174
27/8 28/8 29/8 321
10/9/13

ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ಮುಂದುವರೆದು, ಈ ಕೆಳಕಂಡ ಷರತ್ತುಗಳನ್ನು ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲಿಸಲು ಸೂಚಿಸಿದೆ.

1) ಲಿಖಿತ ಪರೀಕ್ಷೆಯನ್ನು ಶೇಕಡಾ 85ಕ್ಕೆ ಕಡಿಮೆ ಇಲ್ಲದಂತೆ ಹಾಗೂ ಮೌಖಿಕ ಪರೀಕ್ಷೆಯನ್ನು ಶೇಕಡಾ 15 ಮೀರದಂತೆ ಕೈಗೊಳ್ಳುವುದು.
2) ಲಿಖಿತ ಪರೀಕ್ಷೆ ಇಲ್ಲದಿದ್ದಲ್ಲಿ, ಪದವಿಯಲ್ಲಿ ಗಳಿಸಿದ ಅಂಕಗಳಿಗೆ ಶೇಕಡಾ 85ಕ್ಕೆ ಮಿತಿಗೊಳಿಸಿ ಮೌಖಿಕ ಪರೀಕ್ಷೆಯನ್ನು ಶೇಕಡಾ 15ಕ್ಕೆ ಮಿತಿಗೊಳಿಸಿ ನೇಮಕಾತಿ ಮಾಡಿಕೊಳ್ಳತಕ್ಕದ್ದು.
3) ನೇಮಕಾತಿ ವಿಧಿ ವಿಧಾನಗಳನ್ನು ಬೈಲಾದಲ್ಲಿ ಕಡ್ಡಾಯವಾಗಿ ಅಳವಡಿಸಿಕೊಂಡು ನೇಮಕಾತಿ ಮಾಡಿಕೊಳ್ಳತಕ್ಕದ್ದು.
4) ಮೀಸಲಾತಿ ನಿಯಮಗಳನ್ನು ಸಹಕಾರ ಸಂಘಗಳಿಗೆ ಅನ್ವಯವಾಗುವಷ್ಟರ ಮಟ್ಟಿಗೆ ಕಡ್ಡಾಯವಾಗಿ ಪಾಲಿಸತಕ್ಕದ್ದು.
5) ನೇಮಕಾತಿಯಲ್ಲಿ ಪಾರದರ್ಶಕತೆ ಹಾಗೂ ವೃತ್ತಿಪರತೆಯನ್ನು ಪಾಲಿಸುವುದು.

ನೇಮಕಾತಿ ಆಯ್ಕೆ ಸಮಿತಿಯಲ್ಲಿ ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ ಇರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಹೆಚ್.ಎಸ್. ನಾಗರಾಜಯ್ಯ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 1000 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
2. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
3. ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು.
4. ಸಕ್ಕರೆ ನಿರ್ದೇಶಕರು, ಸಕ್ಕರೆ ನಿರ್ದೇಶನಾಲಯ, ಚೌಗುಲೆ ಹೌಸ್, ಕ್ರೆಸೆಂಟ್ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರು, ನೃಪತುಂಗ ರಸ್ತೆ, ಬೆಂಗಳೂರು.
7. ರೇಷ್ಮೆ ಕೃಷಿ ನಿರ್ದೇಶಕರು, ಬಹುಮಹಡಿ ಕಟ್ಟಡ, ಬೆಂಗಳೂರು.
8. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು.
9. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ.
12. ಎಲ್ಲಾ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು.
13. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಹಕಾರ ಇಲಾಖೆ.
14. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

ಆಶಾ/22813

# ಕರ್ನಾಟಕ ಸರ್ಕಾರ
## (ಸಹಕಾರ ಇಲಾಖೆ)
## ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ :ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/211/2019-20 ದಿನಾಂಕ 07-01-2020

-: ಸುತ್ತೋಲೆ :-

ವಿಷಯ :- ಸಹಕಾರ ಸಂಘಗಳ/ಸಂಸ್ಥೆಗಳ ನೇರ ನೇಮಕಾತಿಯಲ್ಲಿ ಲಿಖಿತ ಪರೀಕ್ಷೆಯನ್ನು ಹಾಗೂ ಮೌಲ್ಯಮಾಪನ ನಡೆಸಲು ಪರೀಕ್ಷಾ ಸಂಸ್ಥೆಗಳನ್ನು ನಿರ್ಧರಿಸುವ ಕುರಿತು ಮಾರ್ಗಸೂಚಿಗಳು.

ಉಲ್ಲೇಖ :-
1. ಸರ್ಕಾರದ ನಡವಳಿ ಸಂಖ್ಯೆ : ಸಿಒ 166 ಸಿಎಲ್‌ಎಂ 2012, ದಿನಾಂಕ 23-08-2013
2. ಈ ಕಛೇರಿ ಸುತ್ತೋಲೆ ಸಂಖ್ಯೆ:ಆರ್‌ಎಸ್‌ಆರ್/211/ಎಕ್ಸ್‌ಎಂಸಿ/2007-08, ದಿನಾಂಕ 09-06-2008.
3. ಸರ್ಕಾರದ ನಡವಳಿ ಸಂಖ್ಯೆ : ಸಿಒ 15 ಸಿಎಲ್‌ಎಂ 2005, ದಿನಾಂಕ 13-06-2011

**

ಸಹಕಾರ ಸಂಘಗಳಲ್ಲಿ/ಸಂಸ್ಥೆಗಳಲ್ಲಿ ಇತ್ತೀಚೆಗೆ ನಡೆದ ಅನೇಕ ನೇಮಕಾತಿಗಳಲ್ಲಿ ಹಾಗೂ ಲಿಖಿತಪರೀಕ್ಷೆ ಮತ್ತು ಮೌಲ್ಯಮಾಪನ ವಿಧಾನಗಳ ಕುರಿತು ವ್ಯಾಪಕ ದೂರುಗಳು ಬರುತ್ತಿವೆ. ಈ ಕಛೇರಿಯ ಉಲ್ಲೇಖದಲ್ಲಿ ತಿಳಿಸಿರುವ ಸೂಚನೆಗಳನ್ನು ಉಲ್ಲಂಘಿಸಿ ನೇಮಕಾತಿ ನಡೆಸುತ್ತಿರುವುದು ತಿಳಿದುಬಂದಿರುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ಲಿಖಿತ ಪರೀಕ್ಷೆಯನ್ನು ಹಾಗೂ ಮೌಲ್ಯಮಾಪನವನ್ನು ಪ್ರತಿಷ್ಠಿತ ತ್ರಯಸ್ಥ ಸಂಸ್ಥೆಗಳ ಮೂಲಕವೇ ನಡೆಸುವ ಬಗ್ಗೆ ಉಲ್ಲೇಖಿತ ಸುತ್ತೋಲೆಗಳಲ್ಲಿ ನಿರ್ದಿಷ್ಟವಾದ ಸೂಚನೆಗಳನ್ನು ನೀಡಲಾಗಿರುತ್ತದೆ.

ಅದರಂತೆ ಲಿಖಿತ ಪರೀಕ್ಷೆಯನ್ನು ಮತ್ತು ಮೌಲ್ಯಮಾಪನವನ್ನು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್, ಪುಣೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಟಾಫ್ ಟ್ರೈನಿಂಗ್ ಇನ್ಸ್ಟಿಟ್ಯೂಟ್, ಬೆಂಗಳೂರು, ಕೆನರಾ ಬ್ಯಾಂಕ್ ಸ್ಟಾಫ್ ಟ್ರೈನಿಂಗ್ ಇನ್ಸ್ಟಿಟ್ಯೂಟ್, ಬೆಂಗಳೂರು, ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇಂತಹ ವೃತ್ತಿಪರತೆವುಳ್ಳ ತರಬೇತಿ ಸಂಸ್ಥೆಗಳಿಂದ ನಡೆಸಬೇಕೆಂದು ಉಲ್ಲೇಖಿತ ಸುತ್ತೋಲೆಗಳಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಮೇಲ್ಕಂಡ ಸುತ್ತೋಲೆಯ ಅಂಶಗಳನ್ನು ಪುನರುಚ್ಚರಿಸುತ್ತಾ, ಇನ್ನು ಮುಂದೆ ರಾಜ್ಯದಲ್ಲಿ ನಡೆಯುವ ಎಲ್ಲಾ ರಾಜ್ಯಮಟ್ಟದ/ಜಿಲ್ಲಾಮಟ್ಟದ/ತಾಲ್ಲೂಕು ಮಟ್ಟದ ನೇರ ನೇಮಕಾತಿಗೆ ಸಂಬಂಧಿಸಿದ ಲಿಖಿತ ಪರೀಕ್ಷೆಯನ್ನು ಹಾಗೂ ಮೌಲ್ಯಮಾಪನವನ್ನು Indian Institute of Management (IIM), Bengaluru, Regional Institute of Cooperative Management (RICM), Padmanabhanagara, Bangalore. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಟಾಫ್ ಟ್ರೈನಿಂಗ್ ಸೆಂಟರ್, ಚಾಮರಾಜಪೇಟೆ, ಬೆಂಗಳೂರು. ಕೆನರಾ ಬ್ಯಾಂಕ್ ಸ್ಟಾಫ್ ಟ್ರೈನಿಂಗ್ ಕಾಲೇಜು, ಬಸವನಗುಡಿ, ಬೆಂಗಳೂರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವುಗಳಲ್ಲಿ ಮಾತ್ರ ಪಾರದರ್ಶಕತೆ ನಿಯಮಗಳನ್ನು ಅನುಸರಿಸಿ, ಪರೀಕ್ಷಾ ಸಂಸ್ಥೆಗಳನ್ನು ಆಯ್ಕೆ ಮಾಡಿ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

ಈ ಸುತ್ತೋಲೆಯಲ್ಲಿ ಹೊರಡಿಸಿರುವ ಅಂಶಗಳನ್ನು ನೇಮಕಾತಿ ಸಮಿತಿಯಲ್ಲಿನ ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿಯು ಹೆಚ್ಚಿನ ಮುತುವರ್ಜಿ ಹಾಗೂ ಪರಿಪೂರ್ಣವಾದ ಸಂಸ್ಥೆ ಜವಾಬ್ದಾರಿಯಿಂದ ನಂತರ: ನೇಮಕಾತಿಯ ಮುಂದಿನ ಪ್ರಕ್ರಿಯೆಯನ್ನು ಮುಂದುವರೆಸಲು ಸೂಚಿಸಲಾಗಿದೆ. ಮುಂದುವರೆದು ನೇಮಕಾತಿಯ ಬಗ್ಗೆ ಯಾವುದೇ ದೂರುಗಳು ಬರದಂತೆ ಕಟ್ಟುನಿಟ್ಟಾಗಿ ಹಾಗೂ ಪಕ್ಷಪಾತ ರಹಿತವಾಗಿ ನೇಮಕಾತಿ ಪ್ರಕ್ರಿಯೆ ನಡೆಸಲು ಆಡಳಿತ ಮಂಡಳಿ ಮತ್ತು ನೇಮಕಾತಿ ಸಮಿತಿಗಳಿಗೆ ಈ ಮೂಲಕ ಸೂಚಿಸಲಾಗಿದೆ. ಅಲ್ಲದೆ ಉಲ್ಲೇಖ (2)ರ ಈ ಕಛೇರಿಯ ಸುತ್ತೋಲೆಯಲ್ಲಿ ಕ್ರಮ 3 ಕಂಡಿಕೆ 9ರ ಸಿ: ಸಾಲಿನಲ್ಲಿರುವ "ಮುಂಚಿತ" ಎಂಬ ಪದವನ್ನು ಕೈಬಿಟ್ಟು, ಉಲ್ಲೇಖ (2)ರ ಸುತ್ತೋಲೆಯನ್ನು ಆದರಂತೆ ಮಾರ್ಪಡಿಸಲಾಗಿದೆ. ಉಲ್ಲೇಖ (3)ರ ಸುತ್ತೋಲೆಯ ಕಂಡಿಕೆ 9ರ ಅಂಶವನ್ನು ಸಹ ಮೇಲೆ ತಿಳಿಸಿದ ಮಟ್ಟಿಗೆ ಸಂಸ್ಥೆಗಳಿಗೆ ಅನ್ವಯಿಸುವಂತೆ ಮಾರ್ಪಡಿಸಿದೆ.

ಬಹಳಷ್ಟು ಸಹಕಾರ ಸಂಘಗಳು/ಸಂಸ್ಥೆಗಳು ಹಿಂದಿನ ಸುತ್ತೋಲೆಯ ಅಂಶಗಳನ್ನು ಕಡೆಗಣಿಸಿ ನೇಮಕಾತಿಯನ್ನು ಮಾಡಲಾಗುತ್ತಿದೆ. ಅಲ್ಲದೆ, ನೇಮಕಾತಿ ಸಮಿತಿಯಲ್ಲಿನ ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿಯು ಸಹ ವಿಷಯವನ್ನು ಸಂಬಂಧಿಸಿದ ಸಹಕಾರ ಸಂಘಗಳ ನಿಬಂಧಕರ ಗಮನಕ್ಕೆ ತರದೇ ನೇಮಕಾತಿಯನ್ನು ಅನುಮೋದಿಸಿರುವುದು ಅತ್ಯಂತ ಕ್ರಮಬಾಹಿರವಾಗಿರುತ್ತದೆ. ಈ ಸುತ್ತೋಲೆಯಲ್ಲಿನ ಅಂಶಗಳನ್ನು ಚಾಚೂತಪ್ಪದೇ ಅನುಸರಿಸಲು ಕ್ರಮಕೈಗೊಳ್ಳತಕ್ಕದ್ದು.

ಈ ಸುತ್ತೋಲೆ ತಲುಪಿದ ಬಗ್ಗೆ ಸ್ವೀಕೃತಿ ಕಳುಹಿಸಲು ಸೂಚಿಸಿದೆ.

(ಸಹಿ)
ಎನ್.ಎಸ್. ಪ್ರಸನ್ನಕುಮಾರ್ ಭಾ.ಆ.ಸೇ., 7/11/2001
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕರಾಜ್ಯ, ಬೆಂಗಳೂರು.

ರವರಿಗೆ:

1. ಕೇಂದ್ರಕಛೇರಿಯ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ.
2. ಪ್ರಾಂತೀಯ ಜಂಟಿ ನಿಬಂಧಕರುಗಳಿಗೆ
4. ಜಿಲ್ಲಾ ಉಪನಿಬಂಧಕರುಗಳಿಗೆ
5. ಉಪವಿಭಾಗೀಯ ಸಹಾಯಕ ನಿಬಂಧಕರುಗಳಿಗೆ

} ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ಎಲ್ಲಾ ಸಹಕಾರ ಸಂಘಗಳಿಗೆ ಈ ಸುತ್ತೋಲೆಯ ಪ್ರತಿ ಕಳುಹಿಸಲು ಸೂಚಿಸಿದೆ.

6. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು
7. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಮಹಾಮಂಡಳಗಳು

ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಇವರಿಗೆ ಸಲ್ಲಿಸಿದೆ.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಂ: ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/18 /2020-21

ಸಹಕಾರ ಸಂಘಗಳ ನಿಬಂಧಕರ ಕಛೇರಿ,
ನಂ 1, ಆಲಿ ಆಸ್ಕರ್ ರಸ್ತೆ,
ಬೆಂಗಳೂರು-52
ದಿನಾಂಕ: 30-06-2020

## ಸುತ್ತೋಲೆ

**ವಿಷಯ:** ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 17 ಹಾಗೂ 18 ರಡಿಯಲ್ಲಿ ಮಾರ್ಗಸೂಚಿಗಳು

*****

ರಾಜ್ಯದಲ್ಲಿನ ಸಹಕಾರ ಸಂಘಗಳಲ್ಲಿ/ಬ್ಯಾಂಕುಗಳಲ್ಲಿ ಸಿಬ್ಬಂದಿ ನೇಮಕಾತಿಗೆ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 17 ಮತ್ತು 18 ರಡಿಯಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಹಲವಾರು ಸಹಕಾರ ಸಂಸ್ಥೆಗಳು ತನ್ನ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅನೇಕ ಲೋಪಗಳನ್ನೆಸಗಿರುವ ಹಿನ್ನೆಲೆಯಲ್ಲಿ ಹಲವಾರು ದೂರುಗಳು ಸ್ವೀಕೃತವಾಗಿರುತ್ತವೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗಿದೆ.

1. ಸಿಬ್ಬಂದಿಗಳ ನೇಮಕಾತಿ ಪ್ರಕಟಣೆ ದಿನಪತ್ರಿಕೆಗಳಲ್ಲಿ ಪ್ರಕಟಿಸುವುದು ಕಡ್ಡಾಯವಾಗಿದ್ದು, ಸದರಿ ಪ್ರಕಟಣೆಯಲ್ಲಿ (Recruitment Notification) ಮೀಸಲಾತಿಗಳಿಗೆ ಸಂಬಂಧಿಸಿದಂತೆ Horizontal and Vertical Reservations ಮೀಸಲಾತಿ ಅನ್ವಯ ಪ್ರಕಟಣೆ ಹೊರಡಿಸತಕ್ಕದ್ದು.
2. ನೇಮಕಾತಿ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಅರ್ಜಿ ಸಲ್ಲಿಸಲು ಕನಿಷ್ಠ 15 ದಿವಸಗಳ ಕಾಲಾವಕಾಶ ನೀಡತಕ್ಕದ್ದು.
3. ನೇಮಕಾತಿ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಲಿಖಿತ ಪರೀಕ್ಷೆಗೆ ಕನಿಷ್ಠ ಮೂರು ತಿಂಗಳ ಸಮಯಾವಕಾಶ ನೀಡತಕ್ಕದ್ದು.
4. ಲಿಖಿತ ಪರೀಕ್ಷೆಯ ನಂತರ ಮೌಖಿಕ ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು 1:5 ಅನುಪಾತದಲ್ಲಿ ತಯಾರಿಸಿ ಪ್ರಕಟಿಸತಕ್ಕದ್ದು. ಮೌಖಿಕ ಸಂದರ್ಶನಕ್ಕೆ ಅರ್ಹವಾದ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಹಾಜರಾಗಲು ಕನಿಷ್ಠ 15 ದಿವಸಗಳು ಮುಂಚಿತವಾಗಿ ಸೂಚನೆ ಪತ್ರಗಳನ್ನು ರವಾನಿಸತಕ್ಕದ್ದು.
5. ಲಿಖಿತ ಪರೀಕ್ಷೆಗಳು ಮುಗಿದನಂತರ, ನೇಮಕಾತಿ ಪ್ರಕಟಣೆಗೆ ಹೆಚ್ಚುವರಿ ಹುದ್ದೆಗಳನ್ನು ಸೇರಿಸತಕ್ಕದ್ದಲ್ಲ.
6. ಮೌಖಿಕ ಸಂದರ್ಶನದ ನಂತರ ಮೀಸಲಾತಿವಾರು ಅರ್ಹ ಅಭ್ಯರ್ಥಿಗಳ ಕರಡು ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆ ಸಲ್ಲಿಸಲು 10 ದಿನ ಕಾಲಾವಕಾಶ ನೀಡಿ, ನಂತರ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿ, 15 ದಿನಗಳೊಳಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸತಕ್ಕದ್ದು.
7. ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರ ಎಲ್ಲ ಸಿಂಧುತ್ವ ಪ್ರಮಾಣ ಪತ್ರಗಳನ್ನು ಪಡೆದು, ಪರಿಶೀಲಿಸಿ, ಒಪ್ಪಿದ ನಂತರವೇ ನೇಮಕಾತಿ ಆದೇಶಗಳನ್ನು ಹೊರಡಿಸತಕ್ಕದ್ದು.
8. ಹುದ್ದೆಗಳ ಸಂಖ್ಯೆ 10ಕ್ಕಿಂತ ಕಡಿಮೆ ಇದ್ದಲ್ಲಿ ಮೇಲ್ಕಂಡಂತೆ ತಿಳಿಸಿದ ಕಾಲಮಿತಿಯನ್ನು ಕಡಿಮೆ ಮಾಡುವ ಅಧಿಕಾರವನ್ನು ಆಯಾ ನೇಮಕಾತಿ ಸಮಿತಿಗಳು ಹೊಂದಿರುತ್ತವೆ.

30/6/20

ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಆಡಳಿತ ಮಂಡಳಿ ಜೊತೆಗೆ ನಿಬಂಧಕರ ಪ್ರತಿನಿಧಿಯು ಸಹ ಕ್ರಮ ಜರುಗಿಸತಕ್ಕದ್ದು. ಒಂದು ವೇಳೆ ಮಾರ್ಗಸೂಚಿಗಳನ್ವಯ ನೇಮಕಾತಿಯು ಮುಂದುವರೆಯದಿದ್ದರೆ, ಸದರಿ ವಿಷಯವನ್ನು ಮುಂದಿನ ಕ್ರಮಕ್ಕಾಗಿ ನಿಬಂಧಕರ ಪ್ರತಿನಿಧಿಯು ಸಹಕಾರ ಸಂಘಗಳ ನಿಬಂಧಕರಿಗೆ ವರದಿಮಾಡತಕ್ಕದ್ದು.

ಎಸ್.ಎಸ್. ಪ್ರಸನ್ನ ಕುಮಾರ್ ಭಾ.ಆ.ಸೇ
ಸಹಕಾರ ಸಂಘಗಳ ನಿಬಂಧಕರು 3/6/20
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ,

1. ಕೇಂದ್ರ ಕಛೇರಿಯ ಕಾರ್ಯನಿರ್ವಹಣಾ ಮುಖ್ಯಸ್ಥರುಗಳಿಗೆ
2. ಪ್ರಾಂತೀಯ ಜಂಟಿ ನಿಬಂಧಕರುಗಳಿಗೆ
3. ಜಿಲ್ಲಾ ಉಪನಿಬಂಧಕರುಗಳಿಗೆ
4. ಉಪವಿಭಾಗೀಯ ಸಹಾಯಕ ನಿಬಂಧಕರುಗಳಿಗೆ

} ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ಎಲ್ಲಾ ಸಹಕಾರ ಸಂಘಗಳಿಗೆ ಈ ಸುತ್ತೋಲೆಯ ಪ್ರತಿ ಕಳುಹಿಸಲು ಸೂಚಿಸಿದೆ

5. ವ್ಯವಸ್ಥಾಪಕಾ ನಿರ್ದೇಶಕರು, ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು
6. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಮಹಾ ಮಂಡಳಗಳು

ಪ್ರತಿಯನ್ನು

(1) ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿ ಮಾನ್ಯ ಸಚಿವರ ಅವಗಾಹನೆಗೆ ಸಲ್ಲಿಸಲು

ಹಾಗೂ

(2)ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಇವರಿಗೆ ಸಲ್ಲಿಸಿದೆ.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಂ: ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/41/2020-21

ಸಹಕಾರ ಸಂಘಗಳ ನಿಬಂಧಕರ
ಕಛೇರಿ, ನಂ 1, ಆಲಿ ಅಸ್ಕರ್ ರಸ್ತೆ,
ಬೆಂಗಳೂರು-52
ದಿನಾಂಕ: 16-09-2020

## ಸುತ್ತೋಲೆ

ವಿಷಯ: ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960ರ ನಿಯಮ 17 ಹಾಗೂ 18 ರಡಿಯಲ್ಲಿನ ಮಾರ್ಗಸೂಚಿಗಳು.

ಉಲ್ಲೇಖ:
1. ಸರ್ಕಾರದ ಆದೇಶ ಸಂ:ಸಿಒ 15 ಸಿಎಲ್‌ಎಂ 2005, ದಿ:13-06-2011.
2. ಸರ್ಕಾರದ ಆದೇಶ ಸಂ:ಸಿಒ 166 ಸಿಎಲ್‌ಎಂ 2012, ದಿ:22-8-2013.
3. ಈ ಕಛೇರಿ ಸುತ್ತೋಲೆ ಸಂ: ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/2019-20 ದಿನಾಂಕ:07-01-2020.
4. ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/18/2020-21, ದಿ:30-6-2020.
5. ವಿವಿಧ ಸಹಕಾರ ಸಂಘಗಳು ಸಲ್ಲಿಸಿರುವ ಮನವಿ ಪತ್ರಗಳು

*****

ಈ ಕಛೇರಿಯ ಉಲ್ಲೇಖದಲ್ಲಿ ನಮೂದಿಸಿರುವ (3) ಮತ್ತು (4)ರ ಸುತ್ತೋಲೆಗಳಲ್ಲಿ ಸಹಕಾರ ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಂಬಂಧಪಟ್ಟಂತೆ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಈ ಸುತ್ತೋಲೆಯ ಬಹುತೇಕ ಅಂಶಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳಲ್ಲಿ ಅಳವಡಿಕೆಯಾಗಿದ್ದು, ಉಲ್ಲೇಖ (3) ಮತ್ತು (4)ರ ಸುತ್ತೋಲೆಗಳನ್ನು ಹಿಂಪಡೆಯಲು ಅನೇಕ ಸಹಕಾರ ಸಂಸ್ಥೆಗಳು ಮನವಿ ಸಲ್ಲಿಸಿವೆ. ಈ ವಿಷಯದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲಾಗಿದೆ. ಸಂವಿಧಾನದ 97ನೇ ತಿದ್ದುಪಡಿ, ತತ್ಪರಿಣಾಮವಾಗಿ ಆದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳ ತಿದ್ದುಪಡಿ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳಲ್ಲಿ ಸ್ವಾಯತ್ತತೆ ದೃಷ್ಟಿಯಿಂದ ಹಾಗೂ ಬದಲಾದ ಸನ್ನಿವೇಶದಲ್ಲಿ ಈ ಸುತ್ತೋಲೆಗಳು ಅಗತ್ಯವಿಲ್ಲವೆಂಬುದನ್ನು ಮನಗಂಡು ಉಲ್ಲೇಖ (3) ಮತ್ತು (4)ರಲ್ಲಿ ನಮೂದಿಸಿರುವ ಈ ಕಛೇರಿಯ ಸುತ್ತೋಲೆಗಳನ್ನು ಈ ಮೂಲಕ ಹಿಂಪಡೆಯಲಾಗಿದೆ.

ಮುಂದುವರೆದು, ಸಹಕಾರ ಸಂಘಗಳು ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ ಲಿಖಿತ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಕೆಳಕಂಡ ಬಾಹ್ಯ ಮೂಲ ಸಂಸ್ಥೆಗಳಿಂದ ನಡೆಸತಕ್ಕದ್ದು.

1. ರಾಷ್ಟ್ರೀಯ ಬ್ಯಾಂಕಿಂಗ್ ವ್ಯವಸ್ಥಾಪನಾ ಸಂಸ್ಥೆ, ಪೂನ (National Institute of Banking Management).
2. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಸಿಬ್ಬಂದಿ ತರಬೇತಿ ಸಂಸ್ಥೆ, ಬೆಂಗಳೂರು.
3. ಕೆನರಾ ಬ್ಯಾಂಕ್ ಸಿಬ್ಬಂದಿ ತರಬೇತಿ ಸಂಸ್ಥೆ, ಬೆಂಗಳೂರು.
4. ಭಾರತೀಯ ವ್ಯವಸ್ಥಾಪನಾ ಸಂಸ್ಥೆ, ಬೆಂಗಳೂರು (Indian Institute of Management).

5. ಪ್ರಾದೇಶಿಕ ಸಹಕಾರ ವ್ಯವಸ್ಥಾಪನಾ ಸಂಸ್ಥೆ, ಬೆಂಗಳೂರು. (Regional Institute of Cooperative Management()
6. ರಾಜ್ಯದಲ್ಲಿನ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯಗಳು.
7. ಕರ್ನಾಟಕ ಪರೀಕ್ಷಾ ಪ್ರಾಧಿಕಾರ.
8. ಸಹಕಾರ ಸಂಘಗಳ ನಿಬಂಧಕರು ಅಧಿಸೂಚಿಸಬಹುದಾದ ವೃತ್ತಿಪರತೆಯುಳ್ಳ ಸಂಸ್ಥೆಗಳು.

ಅಲ್ಲದೇ, ಸಹಕಾರ ಸಂಘಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಗಣನೆಗೆ ತೆಗೆದುಕೊಳ್ಳಲು ತಿಳಿಸಲಾಗಿದೆ.

1. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960ರ ಪ್ರಾವಧಾನಗಳನ್ನು ಯಥಾವತ್ತಾಗಿ ಪಾಲಿಸತಕ್ಕದ್ದು.
2. ಮಾನ್ಯ ಸರ್ವೋನ್ನತ ನ್ಯಾಯಾಯಲ, ಉಚ್ಚ ನ್ಯಾಯಾಲಯ ನೀಡಿರುವ ತೀರ್ಪುಗಳನ್ನು ಪಾಲಿತಕ್ಕದ್ದು.
3. ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿ ಇಲ್ಲದೇ ಯಾವುದೇ ಸಹಕಾರ ಸಂಘವು ನೇರ ನೇಮಕಾತಿ ಮಾಡತಕ್ಕದ್ದಲ್ಲ.
4. ನೇಮಕಾತಿಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳತಕ್ಕದ್ದು.
5. ಅನ್ವಯವಾಗುವ ಮಟ್ಟಿಗೆ ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
6. ನೇಮಕಾತಿ ಆದೇಶ ಹೊರಡಿಸುವ ಪೂರ್ವದಲ್ಲಿ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಇನ್ನಿತರ್ರೆ ದಾಖಲಾತಿಗಳ ಜೊತೆಗೆ ಅಭ್ಯರ್ಥಿಗಳು ಸಲ್ಲಿಸುವ ಅಂಕಪಟ್ಟಿ/ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತೆಯನ್ನು ಅವುಗಳನ್ನು ವಿತರಿಸಿದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಗಳೊಂದಿಗೆ ಪರಿಶೀಲನೆ ನಡೆಸತಕ್ಕದ್ದು. ಪರಿಶೀಲನೆಯ ನಂತರ ಅಂತಹ ಪ್ರಮಾಣ ಪತ್ರಗಳು ಸಂಬಂಧಿಸಿದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಗಳಿಂದಲೇ ವಿತರಿಸಲಾದ ಪ್ರಮಾಣಪತ್ರಗಳೆಂದು ಖಾತ್ರಿಯಾದ ನಂತರವೇ ನೇಮಕಾತಿ ಆದೇಶ ಹೊರಡಿಸತಕ್ಕದ್ದು.

ಎಸ್. ಜಿಯಾಉಲ್ಲಾ, ಭಾ.ಆ.ಸೇ
ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

KSCUBF: 185 /2020-21

Date: 24.09.2020

ರಾಜ್ಯದ ಎಲ್ಲ ಪಟ್ಟಣ ಸಹಕಾರ ಬ್ಯಾಂಕುಗಳಿಗೆ

(ಮಂಡಲೀಕ ಎನ್.ಕೇರೂರೆ)
ಮುಖ್ಯಕಾರ್ಯನಿರ್ವಹಣಾಧಿಕಾರಿ

KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ಪತ್ರಿಕೆ**

| ಭಾಗ – I | ಬೆಂಗಳೂರು, ಮಂಗಳವಾರ, ಜೂನ್ ೧೪, ೨೦೧೧ (ಜ್ಯೇಷ್ಠ ೨೪, ಶಕ ವರ್ಷ ೧೯೩೩) | ನಂ. ೫೮ |
|---|---|---|

## ಕರ್ನಾಟಕ ಸರ್ಕಾರದ ನಡವಳಿಗಳು

### ಸಹಕಾರ ಸಚಿವಾಲಯ

**ವಿಷಯ:** ಸಹಕಾರ ಸಂಘಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆ ತರುವ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ ಅಡಿಯಲ್ಲಿ ನಿರ್ದೇಶನ ನೀಡುವ ಕುರಿತು.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಸಿಓ 15 ಸಿಎಲ್‌ಎಂ 2005, ದಿನಾಂಕ:03.02.2005

ಪ್ರಸ್ತಾವನೆ :

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಲ್ಲಿ ಇತ್ತೀಚಿಗೆ ಮಾಡಲಾದ ತಿದ್ದುಪಡಿಗಳ ಗಮನದಲ್ಲಿಟ್ಟುಕೊಂಡು ಹಾಗೂ ಬದಲಾದ ಸನ್ನಿವೇಶದಲ್ಲಿ ಸಹಕಾರ ಸಂಘಗಳು ನೇಮಕಾತಿಗಳನ್ನು ಪರಿಣಾಮಕಾರಿಯಾ ಜಾರಿಗೊಳಿಸಲು ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸುವ ದೃಷ್ಟಿಯಿಂದ ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆ ಅಂಕಗಳನ್ನು ಪರಿಗಣಿಸಿ ಕಡ್ಡಾಯವಾಗಿ ಲಿಖಿತ ಪರೀಕ್ಷೆಯನ್ನು ಜರುಗಿಸಿ ಅಲ್ಲಿ ಪ್ರಾಪ್ತವಾದ ಅಂಕಗಳ ಆಧಾರದ ಮೇ ಸಂದರ್ಶನಕ್ಕೆ ಕರೆದು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕುರಿತು ಹಾಗೂ ಸಹಕಾರ ವಿಷಯದಲ್ಲಿ ಸ್ನಾತಕೋತ್ತ ಪದವಿ/ಪದವಿ/ಡಿಪ್ಲೊಮೋ ಹೊಂದಿದವರಿಗೆ ಕೃಪಾಂಕ ನೀಡುವ ಬಗ್ಗೆ ಚರ್ಚಿಸಿ ಬದಲಾವಣೆಗಳನ್ನು ಅಳವಡಿಸಿಕೊಳ್ಳುವು ಸಮಂಜಸವೆಂದು ತೀರ್ಮಾನಿಸಲಾಗಿರುವ ಮೇರೆಗೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಓ 15 ಸಿಎಲ್‌ಎಂ 2005, ಬೆಂಗಳೂರು, ದಿನಾಂಕ:13.06.2011**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಪ್ರಕರ 30ಬಿ(1) ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಮತ್ತು ಈ ಸಂಬಂಧದಲ್ಲಿ ಇದುವರೆಗೆ ಹೊರಡಿಸಿರುವ ಎಂ ಆದೇಶಗಳನ್ನು ರದ್ದುಗೊಳಿಸಿ/ತಳ್ಳಿಹಾಕಿ ರಾಜ್ಯದ ಎಲ್ಲಾ ಸಹಕಾರ ಸಂಘಗಳ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸುವ ಹಿತದೃಷ್ಟಿಯಿಂದ ಈ ಕೆಳಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಿ ಪಾಲಿಸಬೇಕೆಂದು ಸರ್ಕಾರವು ನಿರ್ದೇಶನ ನೀಡುತ್ತದೆ.

1) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 17 ಮತ್ತು 18ನ್ನು ಪಾಲಿಸತಕ್ಕದ್ದು.

2) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 17ರ ಅಡಿಯಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂ ಮಂಜೂರು ಮಾಡಿಸಿಕೊಂಡ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳತಕ್ಕದ್ದು.

3) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 17 ಅಡಿಯಲ್ಲಿ ಅವಕಾಶವಿರುವಂತೆ ಆಯಾ ಹುದ್ದೆಗಳಿ ನಿರ್ದಿಷ್ಟವಾದ ವಿದ್ಯಾರ್ಹತೆಯನ್ನು ನಿಗದಿಪಡಿಸತಕ್ಕದ್ದು.

4) ಸಹಕಾರ ವಿಷಯದಲ್ಲಿ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡತಕ್ಕದ್ದು.

5) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 18ರ ಅಡಿಯಲ್ಲಿ ಅವಕಾಶವಿರುವಂತೆ ವಯೋಮಿತಿಯನ ಕಡ್ಡಾಯವಾಗಿ ಪಾಲಿಸತಕ್ಕದ್ದು.

6) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸಂಘದ ಕಾರ್ಯಕ್ಷೇತ್ರಕ್ಕೆ ಒಳಪಡುವ ಕನಿಷ್ಠ ಎರಡು ಸ್ಥಳೀಯ ಪ್ರಮು ದಿನಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು. ಇವುಗಳಲ್ಲಿ ಒಂದು ಪ್ರಕಟಣೆ ಕನ್ನಡ ದಿನಪತ್ರಿಕೆಯಲ್ಲಿ ಇರತಕ್ಕದ್ದು. ಪ್ರಕಟಣೆಯಲ್ಲಿ ಭರ್ತಿ ಮಾಡುವ ಹುದ್ದೆಗಳ ಸಂಖ್ಯೆ, ಕನಿಷ್ಠ ವಿದ್ಯಾರ್ಹತೆ, ವೇತನ ಮತ್ತು ಭತ್ಯೆ, ವಯೋಮಿತಿ ಹಾಗೂ ಮೀಸಲಾತಿ ಇತ್ಯಾ ವಿವರಗಳನ್ನು ಪ್ರಕಟಣೆಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

7) ಮೀಸಲಾತಿ ನಿಯಮಗಳನ್ನು ಸಹಕಾರ ಸಂಘಗಳಿಗೆ ಅನ್ವಯವಾಗುವಷ್ಟರ ಮಟ್ಟಿಗೆ ಕಡ್ಡಾಯವಾಗಿ ಪಾಲಿಸತಕ್ಕದ್ದು.

8) ಹುದ್ದೆಗಳನ್ನು ಭರ್ತಿ ಮಾಡುವಾಗ ಕನ್ನಡ ಭಾಷೆ, ಆಂಗ್ಲ ಭಾಷೆ, ಸಾಮಾನ್ಯ ಜ್ಞಾನ ಮತ್ತು ಸಂಬಂಧಿಸಿದ ವಿಷಯಕ್ಕೆ ಲಿಖಿ ಪರೀಕ್ಷೆ ನಡೆಸತಕ್ಕದ್ದು. ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆಗಳಿಗೆ ಪ್ರವೀಣತಾ ಪರೀಕ್ಷೆ ನಡೆಸತಕ್ಕದ್ದು. ಹಾಗೆಂ ವಾಹನ ಚಾಲಕರಿಗೆ ವಾಹನ ಚಾಲನಾ ಪರೀಕ್ಷೆ ನಡೆಸತಕ್ಕದ್ದು.

9) ಲಿಖಿತ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಬಾಹ್ಯಮೂಲ ಸಂಸ್ಥೆಗಳಾದ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂ ಮ್ಯಾನೇಜ್‌ಮೆಂಟ್, ಪೂನಾ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಟಾಫ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು, ಕೆನ ಬ್ಯಾಂಕ್ ಸ್ಟಾಫ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು, ರಾಜ್ಯದಲ್ಲಿರುವ ಅಂಗೀ ವಿಶ್ವವಿದ್ಯಾಲಯಗಳು, ಕರ್ನಾಟಕ ಪರೀಕ್ಷೆ ಪ್ರಾಧಿಕಾರ ಹಾಗೂ ಸರ್ಕಾರವು ಅಧಿಸೂಚಿಸಬಹುದಾದ ವೃತ್ತಿ ಪರತೆಯ ಏಜೆನ್ಸಿಗಳಿಂದ ನಡೆಸತಕ್ಕದ್ದು.

10) ನೇಮಕಾತಿ ಪ್ರಕ್ರಿಯೆಯು ಲಿಖಿತ ಪರೀಕ್ಷೆ ಮತ್ತು ಸಂದರ್ಶನಗಳನ್ನು ಅಥವಾ ಕೇವಲ ಲಿಖಿತ ಪರೀಕ್ಷೆಯ ಒಳಗೊಂಡಿರತಕ್ಕದ್ದು. ಲಿಖಿತ ಪರೀಕ್ಷೆಯಲ್ಲಿ ಅರ್ಹತೆಗಳಿಸಿ ಸಂದರ್ಶನಕ್ಕೆ ಕರೆಯಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಭ ಮಾಡಬೇಕಾದ ಖಾಲಿಹುದ್ದೆಗಳ ಸಂಖ್ಯೆಯ 5 ಪಟ್ಟಿಗೆ ಮೀರತಕ್ಕದ್ದಲ್ಲ.

11) ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತಾದಾಯಕ ಪರೀಕ್ಷೆಯಲ್ಲಿ (qualifying exam) ಗಳಿಸಿದ ಅಂಕಗಳ ಆಧಾರದ ಮೆ ಅಭ್ಯರ್ಥಿಗಳನ್ನು 1:10ರ ಅನುಪಾತದಲ್ಲಿ ಲಿಖಿತ ಪರೀಕ್ಷೆಗೆ ಕರೆಯತಕ್ಕದ್ದು.

12) ಬಾಹ್ಯ ಮೂಲಗಳು ನಡೆಸುವ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ.95ಕ್ಕೆ ಇಳಿಸಿ ಪ್ರಾಪ್ತವಾಗುವ ಅಂ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ಅದನ್ನು ಆಧರಿಸಿ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಸಂದರ್ಶ ಕರೆಯತಕ್ಕದ್ದು. ಸಂದರ್ಶನಕ್ಕೆ ನಿಗದಿಪಡಿಸಲಾದ ಅಂಕಗಳು 5 ಇರುತ್ತದೆ. ಆದರೆ ಯಾವುದೇ ಅಭ್ಯರ್ಥಿಯು ಸಹಕಾರ ವಿಷಯ ಸ್ನಾತಕೋತ್ತರ ಪದವಿ ಅಥವಾ ಪದವಿಯನ್ನು ಹೊಂದಿದ್ದಲ್ಲಿ ಅಥವಾ ಸಹಕಾರದಲ್ಲಿ ಉನ್ನತ ಡಿಪ್ಲೊಮಾ ಅಥವಾ ಸಹ ವಿಷಯದಲ್ಲಿ ಡಿಪ್ಲೊಮಾ ಪಡೆದಿದ್ದಲ್ಲಿ ಅಂತಹ ಅಭ್ಯರ್ಥಿಗೆ ಸಂದರ್ಶನದಲ್ಲಿ ಪ್ರಾಪ್ತವಾಗುವ ಅಂಕದ ಜೊತೆಗೆ ಒಂದು ಅಂಕ ವಿಶೇಷ ಕೃಪಾಂಕವಾಗಿ ನೀಡತಕ್ಕದ್ದು.

**ಉದಾಹರಣೆಗಾಗಿ :**

ಅ) ಒಬ್ಬ ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಶೇ. 80 ಅಂಕಗಳನ್ನು ಗಳಿಸಿದ್ದಾನೆಂದು ಭಾವಿಸಿದರೆ ಅದರಿಂದ ಪ್ರಾಪ್ತವ ಅಂಕವು $\frac{80 \times 95}{100} = 76$ ಆಗುತ್ತದೆ.

ಉ) ಒಬ್ಬ ಅಭ್ಯರ್ಥಿಯು ಅರ್ಹತಾದಾಯಕ ಪರೀಕ್ಷೆಯಲ್ಲಿ ಲಿಖಿತ ಪರೀಕ್ಷೆಯಲ್ಲಿ ಶೇ.60 ಅಂಕಗಳನ್ನು ಗಳಿಸಿದ್ದಾನೆಂದು ಭಾವಿಸಿದ
ಅದರಿಂದ ಪ್ರಾಪ್ತವಾಗುಅಂಕವು $\frac{60 \times 95}{100} = 57$ ಆಗುತ್ತದೆ.

13) ಮೇಲೆ ತಿಳಿಸಿದಂತೆ ಪ್ರಾಪ್ತವಾಗುವ ಅಂಕಗಳ ಜೊತೆಗೆ ಸಂದರ್ಶನದಲ್ಲಿ ಪ್ರಾಪ್ತವಾಗುವ ಅಂಕಗಳನ್ನು ಮತ್ತು ಅನ್ವಯವಾದ ವಿಶೇಷ ಕೃಪಾಂಕ ಒಂದನ್ನು ಕೂಡಿಸಿ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸತಕ್ಕದ್ದು. ಅಂದರೆ ಅಂತಿಮ ಅರ್ಹತಾ ಪಟ್ಟಿಯನ್ನು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇ.95 ರಷ್ಟು + ಸಂದರ್ಶನದಿಂದ ಪ್ರಾಪ್ತವಾಗುವ ಅಂಕಗಳ + ಸಹಕಾ ವಿಷಯದಲ್ಲಿ ಸ್ನಾತಕೋತ್ತರ ಪದವಿ/ಪದವಿ/ಡಿಪ್ಲೊಮಾ ಹೊಂದಿದ್ದಲ್ಲಿ ಕೃಪಾಂಕ ಒಂದು ಇದರ ಆಧಾರದ ಮೇ ತಯಾರಿಸತಕ್ಕದ್ದು. ಸದರಿ ಅಂತಿಮ ಅರ್ಹತಾ ಪಟ್ಟಿಯನ್ನು ಆಧರಿಸಿ ಮೀಸಲಾತಿಯನ್ನು ಪರಿಗಣಿಸಿ ಆಯಾ ಹುದ್ದೆಗಳಿಗೆ ಆಯ ಪಟ್ಟಿಯನ್ನು ತಯಾರಿಸತಕ್ಕದ್ದು.

14) ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆ ಮತ್ತು ಅದಕ್ಕಿಂತ ಮೇಲ್ಪಟ್ಟ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ಹುದ್ದೆಗಳಿ ನಿಗದಿಪಡಿಸಿದ ಅರ್ಹತಾದಾಯಕ ಪರೀಕ್ಷೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದ ಮೇಲೆ 1:10ರ ಅನುಪಾತದ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಕರೆಯತಕ್ಕದ್ದು. ಲಿಖಿತ ಪರೀಕ್ಷೆಯಲ್ಲಿ ಕನ್ನಡ ಭಾಷೆಗೆ – 40 ಅಂಕಗಳು, ಆಂಗ್ಲ ಭಾಷೆಗೆ – 3 ಅಂಕಗಳು, ಸಾಮಾನ್ಯ ಜ್ಞಾನಕ್ಕೆ (ಮಾನವ ಹಕ್ಕುಗಳನ್ನು ಒಳಗೊಂಡಂತೆ) – 30 ಅಂಕಗಳು ಮತ್ತು ಸಹಕಾರ ವಿಷಯಕ್ಕೆ – 10 ಅಂಕಗಳನ್ನು ನಿಗದಿಪಡಿಸತಕ್ಕದ್ದು. ಸಹಕಾರಕ್ಕೆ ಸಂಬಂಧಪಟ್ಟ ವಿಷಯವು ಕೆಳಕಂಡ ಪಠ್ಯ ಕ್ರಮ ಒಳಗೊಂಡಿರತಕ್ಕದ್ದು.

(i) ಸಹಕಾರ ಚಳುವಳಿಯ ಇತಿಹಾಸ

(ii) ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳ ಪಾತ್ರ

(iii) ಸಹಕಾರ ಸಂಘಗಳ ರಚನೆ, ಆಡಳಿತ, ಕಾರ್ಯನಿರ್ವಹಣೆ ಮತ್ತು ಲೆಕ್ಕಪತ್ರ ನಿರ್ವಹಣೆ.

(iv) ಸಹಕಾರಿ ಕೃಷಿ ಪತ್ತಿನ ವ್ಯವಸ್ಥೆ

(v) ಸಹಕಾರ ಸಂಘಗಳ ಕಾನೂನು

15) (i) ಅಭ್ಯರ್ಥಿಗಳು ಅರ್ಹತಾದಾಯಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅವರನ್ನು 1:10 ಅನುಪಾತದಲ್ಲಿ ಲಿಖಿತ ಪರೀಕ್ಷೆಗೆ ಕರೆಯತಕ್ಕದ್ದು.

(ii) ಬಾಹ್ಯ ಮೂಲಗಳು ನಡೆಸುವ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಶೇ.95ರಷ್ಟು ರಿಂದ ಪ್ರಾಪ್ತವಾಗುವ ಅಂಕಗ ಆಧಾರದ ಮೇಲೆ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯತಕ್ಕದ್ದು.

(iii) ಸಂದರ್ಶನಕ್ಕೆ 5 ಅಂಕಗಳನ್ನು ನಿಗದಿಪಡಿಸಿದ್ದು ಅದರಲ್ಲಿ ಗಳಿಸಿದ ಅಂಕಗಳನ್ನು ಸೇರಿಸತಕ್ಕದ್ದು. ಸಹಕಾ ವಿಷಯದಲ್ಲಿ ಸ್ನಾತಕೋತ್ತರ ಪದವಿ/ಪದವಿ/ಡಿಪ್ಲೊಮಾ ಅರ್ಹತೆಯನ್ನು ಹೊಂದಿದ್ದಲ್ಲಿ ವಿಶೇಷ ಕೃಪಾಂ ಒಂದನ್ನು ಸೇರಿಸತಕ್ಕದ್ದು.

(iv) ಬಾಹ್ಯ ಮೂಲಗಳು ನಡೆಸುವ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಶೇ.95ರಷ್ಟು + ಸಂದರ್ಶನದಲ್ಲಿ ಗಳಿಸಿ ಅಂಕಗಳನ್ನು + ಸಹಕಾರ ವಿಷಯದಲ್ಲಿ ಪದವಿ ಸ್ನಾತಕೋತ್ತರ ಪದವಿ/ಪದವಿ/ಡಿಪ್ಲೊಮಾ ಅರ್ಹತೆಯನ ಹೊಂದಿದ್ದಲ್ಲಿ ವಿಶೇಷ ಕೃಪಾಂಕ ಒಂದನ್ನು ಸೇರಿಸಿ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ ಅರ್ಹತ ಪಟ್ಟಿಯನ್ನು ತಯಾರಿಸಿ (merit list) ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿಯನ ಸಿದ್ಧಪಡಿಸತಕ್ಕದ್ದು.

(v) ಸಂದರ್ಶನ ಇಲ್ಲದೇ ಬಾಹ್ಯ ಮೂಲಗಳು ನಡೆಸುವ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರ ಮೇಲೆ ನೇರವಾಗಿ ಆಯ್ಕೆ ಮಾಡಬಹುದು. ಅಂತಹ ಸಂದರ್ಭದಲ್ಲಿ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗ ಅಥವಾ ಅಂತಹ ಅಂಕಗಳಿಗೆ ಸಹಕಾರ ವಿಷಯದಲ್ಲಿ ಪದವಿ ಸ್ನಾತಕೋತ್ತರ ಪದವಿ/ಪದವಿ/ಡಿಪ್ಲೊಮ ಅರ್ಹತೆಯನ್ನು ಹೊಂದಿದ್ದಲ್ಲಿ ವಿಶೇಷ ಕೃಪಾಂಕ ಒಂದನ್ನು ಸೇರಿಸಿ ಪ್ರಾಪ್ತವಾಗುವ ಅಂಕಗಳ ಆಧಾರ

ಮೇಲೆ ಅರ್ಹತಾ ಪಟ್ಟಿಯನ್ನು (merit list) ತಯಾರಿಸತಕ್ಕದ್ದು. ಅಂತಹ ಅರ್ಹತಾ ಪಟ್ಟಿಯ ಆಧಾರದ ಮೇಲೆ ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿಯನ್ನು ತಯಾರಿಸತಕ್ಕದ್ದು.

16) ಗ್ರೂಪ್-ಡಿ ಸೇವೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ ಪಕ್ಷ 8ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಸದ ಸೇವೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಕನ್ನಡ ಓದುವ ಮತ್ತು ಬರೆಯುವ ಸಾಮರ್ಥ್ಯವನ್ನು ಖಾತ್ರಿಪಡಿಸಿಕೊಳ್ಳಲ 30 ಅಂಕಗಳ ಕನ್ನಡ ಪರೀಕ್ಷೆ ನಡೆಸತಕ್ಕದ್ದು. ಕನ್ನಡ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿದ ಅಭ್ಯರ್ಥಿಗಳನ್ನು 1:5ರ ಅನುಪಾತದ ಸಂದರ್ಶನ ನಡೆಸಿ ಆಯ್ಕೆ ಮಾಡತಕ್ಕದ್ದು. ಸಂದರ್ಶನಕ್ಕೆ 5 ಅಂಕಗಳನ್ನು ನಿಗದಿಪಡಿಸತಕ್ಕದ್ದು. ಕನ್ನಡ ಪರೀಕ್ಷೆಯಲ್ಲಿ ಗಳಿಸಿ ಅಂಕಗಳಿಗೆ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಕೂಡಿಸಿ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ ತಯಾರಿಸತಕ್ಕದ್ದು. ಅಂತಹ ಅರ್ಹತಾ ಪಟ್ಟಿಯ ಆಧಾರದ ಮೇಲೆ ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿಯನ ತಯಾರಿಸತಕ್ಕದ್ದು.

17) ಯಾವುದೇ ಸಹಕಾರ ಸಂಘದ ಆಡಳಿತ ಸಮಿತಿಯ ಪದಾವಧಿ ಮುಕ್ತಾಯ ಪೂರ್ವದ ಕೊನೆಯ ಮೂರು ತಿಂಗ ಅವಧಿಯಲ್ಲಿ ಯಾವುದೇ ನೇಮಕಾತಿಗಳನ್ನು ಮಾಡತಕ್ಕದ್ದಲ್ಲ.

18) ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಪ್ರತಿ ಸಂಘವು ಈ ಕೆಳಕಂಡಂತೆ ಒಂದು ನೇಮಕಾತಿ ಸಮಿತಿಯನ ಹೊಂದಿರತಕ್ಕದ್ದು.

| | | |
|---|---|---|
| 01. | ಸಂಘದ ಅಧ್ಯಕ್ಷರು | ಅಧ್ಯಕ್ಷರು |
| 02. | ಆಡಳಿತ ಸಮಿತಿಯಲ್ಲಿ ಆಯ್ಕೆ ಮಾಡಿಕೊಂಡ ಇಬ್ಬರು ನಿರ್ದೇಶಕರು (ಇವರಲ್ಲಿ ಒಬ್ಬರು ಉಪಾಧ್ಯಕ್ಷರು, ಇದ್ದಲ್ಲಿ) | ಸದಸ್ಯರು |
| 03. | ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ | ಸದಸ್ಯರು |
| 04. | ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಸಂಚಾಲಕ ಸದಸ್ಯರು |

ಆದಾಗ್ಯೂ, ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಹಾಮಂಡಳ (ಕೆ.ಎಂ.ಎಫ್) ಮತ್ತು ಜಿಲ್ಲಾ ಹಾಲು ಉತ್ಪಾದಕ ಸಹಕಾರ ಸಂಘಗಳ ಒಕ್ಕೂಟಗಳಲ್ಲಿ ಇರುವ ತಜ್ಞಕೂಟ ಸಮಿತಿಗಳಲ್ಲಿ ಸಹಕಾರ ಸಂಘಗಳ ನಿಬಂಧಕರು ಅಥವಾ ಅವ ಪ್ರತಿನಿಧಿಯನ್ನು ಸೇರಿಸಿಕೊಂಡಲ್ಲಿ ಹಾಗೆ ರಚಿತವಾದ ತಜ್ಞಕೂಟ ಸಮಿತಿಗಳೇ ನೇಮಕಾತಿ ಸಮಿತಿಗಳೆಂದು ಕರ್ತ ನಿರ್ವಹಿಸಬಹುದು.

ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ ಇಲ್ಲದೆ ನೇಮಕಾತಿ ಸಮಿತಿಯ ಸಭೆಯನ್ನು ನಡೆಸತಕ್ಕದ್ದಲ್ಲ.

19) ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ನೇಮಕಾತಿ ಪ್ರಕ್ರಿಯೆ ಮತ್ತು ಆಯ್ಕೆಗೆ ಸಂಬಂಧಿಸಿದಂತೆ ನೀಡಲಾ ಸೂಚನೆಗಳನ್ನು ಪಾಲಿಸತಕ್ಕದ್ದು ಮತ್ತು ಅಗತ್ಯ ವ್ಯವಸ್ಥೆಗಳನ್ನು ಮಾಡತಕ್ಕದ್ದು.

20) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 196 ಸರ್ಕಾರದ/ಸಹಕಾರ ಸಂಘಗಳ ನಿಬಂಧಕರ ಸೂಚನೆಗಳನ್ನು ಹಾಗೂ ಆರ್.ಬಿ.ಐ/ನಬಾರ್ಡಿನ ಮಾರ್ಗಸೂಚಿಗಳನ್ನು ಪರಿಗಣಿ ಎಲ್ಲಾ ಸಹಕಾರ ಸಂಘಗಳು ಪಾರದರ್ಶಕ ನೇಮಕಾತಿ ಪ್ರಕ್ರಿಯೆಯನ್ನೊಳಗೊಂಡ ಮಾನವ ಸಂಪನ್ಮೂಲ ನೀತಿಯನ ರೂಪಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ3) (೫೦೦ ಪ್ರತಿಗಳು)